**ಯಾರಿದ್ದರೂ ಕೂಡ ತಂದೆ ತಾಯಿಯರಂತೆ ಪ್ರೀತಿ ಮತ್ತು ಸುರಕ್ಷತೆಯನ್ನು ನೀಡಲು ಸಾಧ್ಯವಿಲ್ಲ ಎಂದು ಅವನು ಮೃದುವಾದ. ಮಗುವಿನ ಭವಿಷ್ಯದ ದೃಷ್ಟಿಯಿಂದ ಆ ಮಗುವನ್ನು ಯಾರ ಕೈಗೆ ಒಪ್ಪಿಸಬೇಕು ಎನ್ನುವ ತೀರ್ಮಾನ ಅವನಿಗೆ ಜಟಿಲವಾಯಿತು.**

ಒಮ್ಮೆ ನೋಡಿದ. ಅವಳು ಕೂಡ ಒಂದೆರಡು ಕ್ಷಣ ಅವನನ್ನು ದಿಟ್ಟಿಸಿ ನೋಡಿದಳು. ಅವಳ ಕಣ್ಣಿನ ಪ್ರಭೆಯಲ್ಲಿ ಯಾವುದೋ ಒಂದು ಮಿಂಚಿನ ಸೆಳೆತ ಇದ್ದುದನ್ನು ಅವನು ಗುರುತಿಸಿದ ಮತ್ತು ನಿವೇದಿತಾಳನ್ನು ಉದ್ದೇಶಿಸಿ ಅವನು ಕೇಳಿದ:

'ನಿನಗೆ ಕುಮಾರಸ್ವಾಮಿ ಗೊತ್ತಾ.'

'ಗೊತ್ತು' ಎಂದು ಅವಳು ಗೋಣನ್ನು ಮೇಲಕ್ಕೆ ಕೆಳಕ್ಕೆ ಆಡಿಸುತ್ತಾ. ಆಂಗಿಕವಾಗಿಯೂ ತನ್ನ ಮಾತನ್ನು ಖಚಿತಪಡಿಸಿದಳು. ಆದರೆ ಹೆಚ್ಚು ಆಘಾತಕ್ಕೆ ಒಳಗಾದವಳು ಕಲ್ಯಾಣಿ. ನಿವೇದಿತಾಳ ಮಾತಿನಿಂದ ಅವಳು ತತ್ತರಿಸಿ ಹೋದಳು. ತನ್ನ ಬದುಕಿನ ವಾಸ್ತವತೆಯನ್ನೇ ತನ್ನ ಮಗಳು ತುಂಬಿದ ನ್ಯಾಯಾಲಯದಲ್ಲಿ ಸುಳ್ಳೆಂದು ಸಾಬೀತು ಪಡಿಸುವ ಕ್ರಮವನ್ನು ಕಂಡು ಅವಳು ದಂಗುಬಡಿದು ಹೋಗಿದ್ದಳು. ಅಸಹಾಯಕತೆಯಿಂದ ಅವಳ ಕಣ್ಣಂಚಿನಲ್ಲಿ ನೀರು ಮಡುಗಟ್ಟಿತ್ತು. ಅವಳಲ್ಲಿ ವ್ಯಕ್ತವಾಗುತ್ತಿದ್ದ ಆತಂಕ ಮತ್ತು ಭಯ ಹಾಗೂ ನೋವನ್ನು ಕಂಡು ಶಾಹಿದ್ ಹುಸೇನ್‌ಗೂ ಕೂಡ ಪರಿತಾಪವಾಯಿತು. ತಾಯಿಯ ಸತ್ಯವನ್ನು ಒರೆಗೆ ಹಚ್ಚುವ ಸಲುವಾಗಿ ಇನ್ನು ಮುಂದೆ ಮಗುವನ್ನು ನ್ಯಾಯಾಲಯಕ್ಕೆ ಕರೆಸಬಾರದು ಎಂಬ ಭಾವವೊಂದು ಅವನಲ್ಲಿ ಉತ್ಪನ್ನವಾಯಿತು. ಈ ಸಂದರ್ಭದಲ್ಲಿ ಇನ್ನು ಹಿಂದೆಗೆಯುವಂತಿಲ್ಲ. ಹೀಗಾಗಿ ಅವನು ಮುಂದಿನ ಪ್ರಶ್ನೆಯನ್ನು ಕೇಳಿದ.

'ಕುಮಾರಸ್ವಾಮಿ ನಿನಗೆ ಹೇಗೆ ಗೊತ್ತು ನಿವೇದಿತಾ?'

'ಎಲ್ಲರಿಗೂ ಗೊತ್ತಲ್ಲ, ಅವರು ನಮ್ಮ ರಾಜ್ಯದ ಮುಖ್ಯಮಂತ್ರಿ ಅಲ್ವಾ.'

ಇಡೀ ನ್ಯಾಯಾಲಯದಲ್ಲಿ ನಗೆಯ ಅಲೆ ಹರಡಿತು. ತನ್ನ ಮಾತು ಎಷ್ಟೊಂದು ಸತ್ಯ ಎಂದು ಸಾಬೀತಾದುದಕ್ಕೆ ಕಲ್ಯಾಣಿಗೆ ಒಂದೆಡೆ ಹರ್ಷ, ಇನ್ನೊಂದೆಡೆ ಮೂರಾಬಟ್ಟೆಯಾದ ತನ್ನ ಸಂಸಾರವನ್ನು ಕಂಡು ವ್ಯಥೆ ಏಕಕಾಲದಲ್ಲಿ ಉಂಟಾದವು. ಕುಮಾರಸ್ವಾಮಿ ಕೆಂಪೇರಿ ಅವಡುಗಚ್ಚಿದ. ಈ ಪ್ರಸಂಗ ನನಗೆ ಈಗ ಯಾಕಾದರೂ ನೆನಪಿಗೆ ಬರಬೇಕು?

ಒಂದೆಡೆ ಈ ಮಗುವಿನ ಕಸ್ಟಡಿ ಕೇಸು, ಇನ್ನೊಂದೆಡೆ ಜಯಶಂಕರನ ಕೊಲೆಯ ಪ್ರಕರಣ, ಮತ್ತೊಂದೆಡೆ ನಿವೇದಿತಾಳ ಅಭಿರಕ್ಷೆಯ ಪ್ರಕರಣ ಇವೆಲ್ಲವೂ ಹೇಗೆ ಕಲಸು ಮೇಲೋಗರವಾಗುತ್ತಿದೆ. ಇಂದು ನಾನೇಕೆ ತೀವ್ರ ಭಾವಾವೇಗದಿಂದ ಬಳಲುತ್ತಿದ್ದೇನೆ. ಇದನ್ನು ಹೇಗೆ ನಿವಾರಿಸುವುದು? ಅವನು ತನ್ನ ಎರಡು ಕೈಗಳಿಂದಲೂ ತಲೆಯನ್ನು ಹಿಡಿದುಕೊಳ್ಳಬೇಕೆಂದು ಬಯಸಿದ. ಆ ಸಂಕಟದ ಉದ್ವಿಗ್ನತೆಯ ಸಂದರ್ಭದಲ್ಲೂ ಅವನು ಕುಳಿತಿದ್ದ ಕುರ್ಚಿಯ ಹೊಣೆಗಾರಿಕೆ ಅವನಿಗೆ ಮುಖ್ಯವಾಯಿತು. ತನ್ನ ಮಾನಸಿಕ ವಿಪ್ಲವದ ಸಕಲ ತರಂಗಾಂತರಗಳನ್ನು ಅವನು ನಿಯಂತ್ರಣಕ್ಕೆ ತೆಗೆದುಕೊಂಡು ನೇರವಾಗಿ ಕುರ್ಚಿಯ ಮೇಲೆ ಕುಳಿತು ದೇಹವನ್ನು ಸಡಿಲ ಬಿಟ್ಟು ದೀರ್ಘ ಶ್ವಾಸವನ್ನು ತೆಗೆದುಕೊಂಡ. ಈಗ ಅವನು ನಿಜವಾಗಿಯೂ ವಾಸ್ತವಕ್ಕೆ ಮರಳಿದ.

'ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯಾ ಮೈ ಆಪಲ್ ಬೇಬಿ?' ಅವನು ಕೇಳಿದ. ಅವಳೇನೋ